ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ, ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/70/2015-16. ದಿನಾಂಕ:08-08-2016.

<table>
<tr><th>ವಾದಿಗಳು</th><th>ಪ್ರತಿವಾದಿಗಳು</th></tr>
<tr><td>1)ಹೆಚ್.ಬಿ.ಸುಮ ಗಂಡ ಕೆ.ಬಿ.ತಿಪ್ಪೇಸ್ವಾಮಿ<br>ಹೂಡೇಂ ಗ್ರಾಮ<br>ಕೂಡ್ಲಿಗಿ ತಾಲೂಕು.<br>2)ಎನ್.ಲಕ್ಷ್ಮಪ್ಪ ತಂದೆ ಲೇಟ್ ಭೀಮಪ್ಪ<br>01 ನೇ ಮೇನ್ ರೋಡ್ 04 ನೇ ಕ್ರಾಸ್<br>ಕೊಟಗಿ ಪಾಳ್ಯ ಬೆಂಗಳೂರು:91<br>3)ಎಸ್.ಬೋಸೆಮಲ್ಲಯ್ಯ ತಂದೆ ಸಣ್ಣ ಮಲ್ಲಯ್ಯ<br>ಹೂಡೇಂ ಗ್ರಾಮ<br>ಕೂಡ್ಲಿಗಿ ತಾಲೂಕು</td><td>ಎನ್.ಡಿ.ಭೀಮೇಶ ತಂದೆ ಲೇಟ್ ದಾಸಪ್ಪ<br>ಹೂಡೇಂ ಗ್ರಾಮ<br>ಕೂಡ್ಲಿಗಿ ತಾಲೂಕು ಕೇರ್ ಆಫ್ ಅಡ್ರಾಸ್<br>ವಿಶ್ವಚೇತ ವಿದ್ಯಾನಿಕೇತನ<br>ರೆಸಿಡೇನ್ಸಿಯಲ್ ಸ್ಕೂಲ್<br>ತಿರಮಗೊಂಡನಹಳ್ಳಿ (ಪೋ)<br>ಹದಡಿ ರಸ್ತೆ ದಾವಣಗೆರೆ (ತಾ) ಜಿಲ್ಲಾ</td></tr>
<tr><td colspan="2">ಕೂಡ್ಲಿಗಿ ತಾಲೂಕು ಹೂಡೇಂ ಗ್ರಾಮದ ಸನಂ 360ಡಿ. 360ಇ/1ಪೈಕಿ. ವಿಸ್ತೀರ್ಣ 1-48. 2-25. ಎಕ್ರೆ ಜಮೀನುಗಳನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ.</td></tr>
</table>

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಹೂಡೇಂ ಗ್ರಾಮದ ಸನಂ 360ಡಿ. 360ಇ/1ಪೈಕಿ. ವಿಸ್ತೀರ್ಣ 1-48. 2-25. ಎಕ್ರೆ ಜಮೀನುಗಳನ್ನು ಬೆಂಗಳೂರು ನಗರದ ಎನ್.ಲಕ್ಷ್ಮಪ್ಪ ತಂದೆ ಲೇಟ್ ಭೀಮಪ್ಪ ಹಾಗೂ ಜನರಲ್ ಫವರ್ ಆಫ್ ಆಟಾರ್ನಿ ಹೋಲ್ಡರ್ ಸದರಿ ಗ್ರಾಮದ ಎಸ್ ಬೋಸೆಮಲ್ಲಯ್ಯ ತಂದೆ ಸಣ್ಣ ಮಲ್ಲಯ್ಯ ಇವರಿಂದ ಸದರಿ ಗ್ರಾಮದ ಹೆಚ್.ಬಿ.ಸುಮ ಗಂಡ ಕೆ.ಬಿ.ತಿಪ್ಪೇಸ್ವಾಮಿ ಇವರು ದಿನಾಂಕ 19-12-2014 ರ ಡಾಕ್ಯುಮೆಂಟ್ ನಂಬರ್: 3288/2014-15 ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಹೂಡೇಂ ಇವರು ನಮೂನೆ-21 ನೋಟಿಸನ್ನು ದಿನಾಂಕ 22-12-2014. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ಎನ್.ಡಿ.ಭೀಮೇಶ ತಂದೆ ಲೇಟ್ ದಾಸಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 26/2015-16. ದಿನಾಂಕ 23-01-2015. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 20-10-2015. ರಿಂದ 08-08-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಹೂಡೇಂ ಗ್ರಾಮದ ಸನಂ 360ಡಿ. 360ಇ/1ಪೈಕಿ. ವಿಸ್ತೀರ್ಣ 1-48. 2-25. ಎಕ್ರೆ ಜಮೀನುಗಳನ್ನು ಬೆಂಗಳೂರು ನಗರದ ಎನ್.ಲಕ್ಷ್ಮಪ್ಪ ತಂದೆ ಲೇಟ್ ಭೀಮಪ್ಪ ಹಾಗೂ ದಿನಾಂಕ 23-11-2013 ರ ಡಾಕ್ಯುಮೆಂಟ್ ನಂಬರ್: 18/2013-14 ರ ಪ್ರಕಾರ ಜನರಲ್ ಫವರ್ ಆಫ್ ಆಟಾರ್ನಿ ಹೊಲ್ಡರ್ ಆದ ಸದರಿ ಗ್ರಾಮದ ಎಸ್ ಬೋಸೆ ಮಲ್ಲಯ್ಯ ತಂದೆ ಸಣ್ಣ ಮಲ್ಲಯ್ಯ ಇವರುಗಳಿಂದ ದಿನಾಂಕ 19-12-2014 ರ ಡಾಕ್ಯುಮೆಂಟ್ ನಂಬರ್: 3288/2014-15 ರ ಪ್ರಕಾರ ರೂ:3.36.000/- ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ

ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತೇನೆ. ಸದರಿ ಕ್ರಯ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನುಗಳು ಒಟ್ಟು ಕುಟುಂಬದ ಹಾಗೂ ಪಿತ್ರಾರ್ಜಿತ ಜಮೀನುಗಳು ಆಗಿರುತ್ತವೆ. ಹಾಗೂ ನಾವುಗಳು ಯಾವುದೇ ಪಾಲು ವಿಭಾಗವಾಗದೇ ಒಟ್ಟು ಕುಟುಂಬಕ್ಕೆ ಸೇರಿದ ಜಮೀನುಗಳು ಆಗಿರುತ್ತವೆ. ಈ ಎಲ್ಲಾ ಜಮೀನುಗಳ ಖಾತೆಗಳನ್ನು ನೇವಾರ ಲಕ್ಷ್ಮಪ್ಪ ತಂದೆ ಭೀಮಪ್ಪ ಇವರು ತಮ್ಮ ಹೆಸರಲ್ಲಿ ವರ್ಗಾವಣೆ ಮಾಡಿ ಕೊಂಡು ಸದರಿ ಆಸ್ತೀಗಳನ್ನು ಕಬಳಿಸಿರುತ್ತಾರೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ಕ್ರಯದಾರರ ಹೆಸರಲ್ಲಿ ಖಾತಾ ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆ ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ಕಂದಾಯ ನ್ಯಾಯಾಲಯಕ್ಕೆ ನೊಂದಾಯಿತ ಕ್ರಯ ಪತ್ರವನ್ನು ರದ್ದು ಪಡಿಸುವ ಅಧಿಕಾರ ವ್ಯಾಪ್ತಿ ಇಲ್ಲದ ಇರುವುದರಿಂದ ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 128 ರ ಅಡಿಯಲ್ಲಿ ತಕರಾರುದಾರರ ಅರ್ಜಿಯನ್ನು ತಳ್ಳಿಹಾಕಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಹೂಡೇಂ ಗ್ರಾಮದ ಸನಂ 360ಡಿ. 360ಇ/1ಪೈಕಿ. ವಿಸ್ತೀರ್ಣ 1-48. 2-25. ಎಕ್ರೆ ಜಮೀನುಗಳನ್ನು ದಿನಾಂಕ 19-12-2014 ರ ಡಾಕ್ಯುಮೆಂಟ್ ನಂಬರ್:3288/2014-15 ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ಹೆಚ್.ಬಿ.ಸುಮ ಗಂಡ ಕೆ.ಬಿ.ತಿಪ್ಪೇಸ್ವಾಮಿ ಹೂಡೇಂ ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 08-08-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ...
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಹೆಚ್.ಬಿ.ಸುಮ ಗಂಡ ಕೆ.ಬಿ.ತಿಪ್ಪೇಸ್ವಾಮಿ. ಹೂಡೇಂ ಗ್ರಾಮ ಕೂಡ್ಲಿಗಿ ತಾಲೂಕು. ಎನ್.ಲಕ್ಷ್ಮಪ್ಪ ತಂದೆ ಲೇಟ್ ಭೀಮಪ್ಪ 01 ನೇ ಮೇನ್ ರೋಡ್ 04 ನೇ ಕ್ರಾಸ್ ಕೊಟಗಿ ಪಾಳ್ಯ ಬೆಂಗಳೂರು: 91 ಎಸ್.ಬೋಸೆಮಲ್ಲಯ್ಯ ತಂದೆ ಸಣ್ಣಮಲ್ಲಯ್ಯ ಹೂಡೇಂ ಗ್ರಾಮ ಕೂಡ್ಲಿಗಿ ತಾಲೂಕು ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಎನ್.ಡಿ.ಭೀಮೇಶ ತಂದೆ ಲೇಟ್ ದಾಸಪ್ಪ. ಹೂಡೇಂ ಗ್ರಾಮ ಕೂಡ್ಲಿಗಿ ತಾಲೂಕು ಕೇರ್ ಆಫ್ ಅಡ್ರಾಸ್ ವಿಶ್ವಚೇತ ವಿದ್ಯಾನಿಕೇತನ ರೆಸಿಡೇನ್ಸಿಯಲ್ ಸ್ಕೂಲ್ ತಿರಮಗೊಂಡನಹಳ್ಳಿ (ಪೋ) ಹದಡಿ ರಸ್ತೇ ದಾವಣಗೆರೆ (ತಾ) (ಜಿಲ್ಲಾ) ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.

ರವಾನಿಸಲಾಗಿದೆ
ಕ್ರ.ಸಂ.
ದಿನಾಂಕ

ಬೋಸೆಮಲ್ಲಯ್ಯ